# ಕೃತಜ್ಞತೆಗಳು

ಕಾಡುಗೊಲ್ಲರ ಸಂಸ್ಕೃತಿ ಮತ್ತು ಸಾಹಿತ್ಯವನ್ನು ಕುರಿತಂತೆ ಸಂಶೋಧನೆಯನ್ನು ಕೈಗೊಳ್ಳಬೇಕೆಂಬ ಹಂಬಲ ನನ್ನಲ್ಲಿ ಬಹುವರ್ಷಗಳಿಂದ ಅಂತರ್ಗತವಾಗಿಯೇ ತುಡಿಯುತ್ತಿತ್ತು. ಈ ಹಂಬಲ ಒಂದು ನಿರ್ದಿಷ್ಟ ಮೂರ್ತರೂಪ ತಳೆದಾಗ, ನನ್ನ ಸಂಶೋಧನೆಗೆ ಮಾರ್ಗದರ್ಶಕರ ಅವಶ್ಯಕತೆ ಇತ್ತು. ಆ ಸಂದರ್ಭದಲ್ಲಿ ದಾವಣಗೆರೆ ಸ್ನಾತಕೋತ್ತರ ಕೇಂದ್ರದ ವಾಣಿಜ್ಯ ವಿಭಾಗದ ಪ್ರಾಧ್ಯಾಪಕರಾದ ಡಾ|| ಜಿ. ಟಿ. ಗೋವಿಂದಪ್ಪನವರ ಮೂಲಕ ಕನ್ನಡ ಭಾರತಿಯ ಪ್ರವಾಚಕರಾದ ಡಾ|| ಸಣ್ಣರಾಮ ಅವರ ಸಂಪರ್ಕವಾಯಿತು. ಮೊದಲ ಭೇಟಿಯಲ್ಲೇ ಡಾ|| ಸಣ್ಣರಾಮ ಅವರು ನನಗೆ ಮಾರ್ಗದರ್ಶಕರಾಗಲು ಒಪ್ಪಿಗೆ ಸೂಚಿಸಿದ್ದು ನನಗೆ ಅತೀವ ಸಂತೋಷವಾಯಿತು. **"ಕಾಡುಗೊಲ್ಲರ ಜನಪದ ಕಾವ್ಯಗಳಲ್ಲಿ ಸಾಂಸ್ಕೃತಿಕ ಸಂಘರ್ಷ"** ಎಂಬ ಶೀರ್ಷಿಕೆಯಲ್ಲಿ ನನ್ನ ಆಲೋಚನಾ ಕ್ರಮಗಳಿಗೆ ಒಂದು ನಿರ್ದಿಷ್ಟ ಚೌಕಟ್ಟನ್ನು ಹಾಕಿಕೊಟ್ಟರು. ಅಧ್ಯಯನದ ಉದ್ದಕ್ಕೂ ಉತ್ತಮ ಸಲಹೆ ಸೂಚನೆಗಳನ್ನು ನೀಡಿದ್ದಾರೆ. ಸಜ್ಜನಿಕೆಯಿಂದ ಸಹಕರಿಸಿದ್ದಾರೆ. ನನ್ನ ಸಂಶೋಧನೆಯ ಯಶಸ್ಸು ಪ್ರಥಮಕ್ಕೆ ಮಾರ್ಗದರ್ಶಕರಾದ **ಡಾ|| ಸಣ್ಣರಾಮ** ಮತ್ತು ಇವರನ್ನು ಪರಿಚಯಿಸಿದ **ಡಾ|| ಜಿ.ಟಿ. ಗೋವಿಂದಪ್ಪ** ಇವರಿಗೆ ಸಲ್ಲುತ್ತದೆ. ಈ ಸಂದರ್ಭದಲ್ಲಿ ಶ್ರೀಯುತರಿಗೆ ತುಂಬು ಹೃದಯದ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ .

**ಡಾ|| ತೀ. ನಂ. ಶಂಕರನಾರಾಯಣ, ಡಾ|| ಶ್ರೀಕಂಠ ಕೂಡಿಗೆ, ಡಾ|| ಬಸವರಾಜ ನೆಲ್ಲಿಸರ, ಡಾ|| ಕುಮಾರಚಲ್ಯ, ಡಾ|| ರಂಗರಾಜು ವನದುರ್ಗ, ಡಾ|| ಕೇಶವಶರ್ಮ** ಇವರುಗಳು, ನಾನು ಕನ್ನಡ ಭಾರತಿಗೆ ಭೇಟಿನೀಡಿದಾಗಲೆಲ್ಲ ತುಂಬು ಅಕ್ಕರೆಯಿಂದ ಮಾತನಾಡಿಸಿ ಅಧ್ಯಯನಕ್ಕೆ ಸಂಭಂಧಿಸಿದ ಹತ್ತಾರು ಸಂಗತಿಗಳನ್ನು ಚರ್ಚಿಸಿ ಸೂಕ್ತ ಸಲಹೆಗಳನ್ನು ಕೊಟ್ಟು ಸಹಕರಿಸಿದ್ದಾರೆ.

ಆತ್ಮೀಯರಾದ **ಡಾ|| ಮೀರಾಸಾಬಿಹಳ್ಳಿ ಶಿವಣ್ಣರು** ಕಾಡುಗೊಲ್ಲರಿಗೆ ಸಂಬಂಧಿಸಿದ ಮಹತ್ವ ಪೂರ್ಣ ಮಾಹಿತಿಗಳನ್ನು, ಸಾಂಸ್ಕೃತಿಕ ಒಳನೋಟಗಳನ್ನು ನನ್ನಲ್ಲಿ ತುಂಬಿದ್ದಾರೆ. ಇದರೊಂದಿಗೆ ಉಪಯುಕ್ತ ಕೆಲವು ಫೋಟೋಗಳನ್ನು ಒದಗಿಸಿಕೊಟ್ಟಿದ್ದಾರೆ. ಚಿತ್ರದುರ್ಗದ ಪ್ರೀತಿಯ ಸ್ನೇಹಿತರಾದ **ಡಾ|| ಆರ್. ಶಿವಪ್ಪ, ಪ್ರೊ|| ಸಂಗೇನಹಳ್ಳಿ ಅಶೋಕ್‌ಕುಮಾರ್** ರವರು ನನ್ನ ಅಧ್ಯಯನದ ಬಗ್ಗೆ ಅಪಾರ ಕಾಳಜಿವಹಿಸಿ ಕೆಲವು ಮುಖ್ಯ ದಾಖಲೆಗಳನ್ನು ಒದಗಿಸಿದ್ದಾರೆ.

ನಮ್ಮ ಕಾಲೇಜಿನ ಹಿಂದಿನ ಪ್ರಾಂಶುಪಾಲರಾದ **ಪ್ರೊ ॥ ಗಂಗಾಧರಯ್ಯ, ಪ್ರೊ ॥ ಎಂ. ಶೇಖರಯ್ಯ** ಇವರು ನನ್ನನ್ನು ಬೆನ್ನು ತಟ್ಟಿ ಪ್ರೋತ್ಸಾಹಿಸಿದ್ದಾರೆ. ಪ್ರಸ್ತುತ ಪ್ರಿನ್ಸಿಪಾಲರಾದ **ಪ್ರೊ ॥ ಸಿ. ಕೆ. ಮಹೇಶ್** ಅವರು ತಮ್ಮ ಆಳ ಅಧ್ಯಯನ ಮತ್ತು ವಿದ್ವತ್‌ಪೂರ್ಣ ಚಿಂತನೆಗಳಿಂದ ನನ್ನನ್ನು ಹುರುದುಂಬಿಸಿದ್ದಾರೆ. ಹೊಸ ಹೊಳಹುಗಳನ್ನು ತೋರಿಸಿದ್ದಾರೆ. ನನ್ನ ವಿಭಾಗದ ಸಹೋದ್ಯೋಗಿ ಗೆಳೆಯರಾದ **ಎಸ್. ಆರ್. ಅಂಜನಪ್ಪ, ಎಂ, ಮಂಜಣ್ಣ, ಎಂ. ಓ. ತಿಪ್ಪಯ್ಯ, ಜಿ. ವೆಂಕಟೇಶ್** ರವರು ಒಟ್ಟು ಸೇರಿ ನನ್ನ ಮೆಲಿನ ವಿಭಾಗದ ಕಾರ್ಯ ಬಾಹುಳ್ಯವನ್ನು ಸಮನಾಗಿ ಹಂಚಿಕೊಂಡು, ನಾನು ಅಧ್ಯಯನಕ್ಕೆ ಹೆಚ್ಚಿನ ಸಮಯವನ್ನು ವಿನಿಯೋಗಿಸಿಕೊಳ್ಳಲು ಅನುವು ಮಾಡಿಕೊಟ್ಟಿದ್ದಾರೆ. ಕಾಲೇಜಿನ ಹಿರಿಯ ಪ್ರಾಧ್ಯಾಪಕರಾದ **ಪ್ರೊ॥ ಎಸ್.ಸಿದ್ದಪ್ಪ, ಪ್ರೊ॥ ಜಿ. ಹೆಚ್. ಈಶ್ವರಪ್ಪ, ಪ್ರೊ॥ ಜಿ.ಎಸ್. ರಂಗನಾಥ್, ಪ್ರೊ॥ ಬಿ. ಎನ್. ಹೊಳಿಹೊಸೂರು, ಪ್ರೊ॥ ಆರ್. ತಿಪ್ಪಾರೆಡ್ಡಿ, ಪ್ರೊ॥ ಎಂ.ಯು. ಕೃಷ್ಣಯ್ಯ**, ಹಾಗೂ ಉಪನ್ಯಾಸಕರಾದ **ಶೀಮತಿ ಸಿ. ವೈ. ಯಶೋಧ** ಇವರು ನನ್ನ ಅಧ್ಯಯನದ ಬಗ್ಗೆ ವಿಶೇಷ ಕಾಳಜಿಯನ್ನು ವಹಿಸಿ ಆಗಿಂದಾಗ್ಗೆ ವಿಚಾರ ವಿನಿಮಯ ಮಾಡಿದ್ದಾರೆ. ಗ್ರಂಥಪಾಲಕರಾದ **ವಿ. ಆರ್. ಗುರುಮೂರ್ತಿ** ಯವರು ಯಾವುದೇ ಹೊತ್ತಿನಲ್ಲಿಯೂ ಬೇಸರಿಸಿಕೊಳ್ಳದೆ ಗ್ರಂಥಾಲಯದ ಪುಸ್ತಕಗಳನ್ನು ಅಧ್ಯಯನಕ್ಕೆ ಒದಗಿಸಿಕೊಟ್ಟಿದ್ದಾರೆ. ನಮ್ಮ ಕಾಲೇಜಿನ **ಎಲ್ಲಾ ಸಹೋದ್ಯೋಗಿಮಿತ್ರರು** ಹಾಗೂ **ಸಿಬ್ಬಂದಿವರ್ಗದವರು** ನನ್ನ ಅಧ್ಯಯನದ ಬಗ್ಗೆ ವಿಶೇಷ ಪ್ರೀತಿಗೌರವಗಳನ್ನು ತೋರಿದ್ದಾರೆ.

ಚಿತ್ರದುರ್ಗದ ರೇಷ್ಮೆ ಸಿ. ಚಿತ್ತಯ್ಯ ಮತ್ತು ಪೂಜಪ್ಪ ಇವರು ನನ್ನ ಕ್ಷೇತ್ರಕಾರ್ಯದ ಹಾದಿಯಲ್ಲಿ ನಿರಂತರವಾಗಿ ನನ್ನೊಂದಿಗೆ ಹೆಜ್ಜೆಹಾಕಿದ್ದಾರೆ ಕಾಡುಗೊಲ್ಲರ ಸಂಸ್ಕೃತಿಗೆ ಸಂಬಂಧಿಸಿದಂತೆ ಮಹತ್ವಪೂರ್ಣ ಮಾಹಿತಿಗಳನ್ನು ಒದಗಿಸಿದ್ದಾರೆ. ಈ ಸಂಬಂಧವಾಗಿ ಆಳವಾಗಿ ನನ್ನೊಂದಿಗೆ ಚರ್ಚಿಸಿದ್ದಾರೆ. ಅಂತೆಯೇ ಸಮುದಾಯದ ಅನೇಕ ಹಿರಿಯರು ಸೂಕ್ತ ಮಾಹಿತಿ ನೀಡಿ ಉಪಕರಿಸಿದ್ದಾರೆ. ಕಲಾವಿದರು ರಾತ್ರಿಯಿಡೀ ಪದಗಳನ್ನು ಹೇಳಿ ಅಧ್ಯಯನದ ಜೋಳಿಗೆ ತುಂಬಿಸಿದ್ದಾರೆ.

ನನ್ನ ಅಧ್ಯಯನಕ್ಕೆ ಅನೇಕ ಮಾಹಿತಿಗಳನ್ನು ನನ್ನ ತಂದೆಯವರಾದ **ದಿ॥ ಎಂ. ಕೆಂಗಯ್ಯನವರು** ಒದಗಿಸಿಕೊಟ್ಟಿದ್ದರು; ಅನೇಕ ಕಲಾವಿದರನ್ನು ಪರಿಚಯಿಸಿದ್ದರು. ಅಂತೆಯೇ ತಾಯಿ **ಶ್ರೀಮತಿ ತಿಪ್ಪಮ್ಮ, ಅಣ್ಣ ಕೆ. ನಾಗರಾಜು, ತಮ್ಮ ಕೆ. ಕಾಂತರಾಜ ಅರಸ್**, ಹಾಗೂ ಸಹೋದರಿಯರಾದ **ಸುನಂದ ತಿಪ್ಪೇಸ್ವಾಮಿ, ಪುಷ್ಪ ಕರಿಯಪ್ಪ**–ಇವರು ಉತ್ತಮ ರೀತಿಯಲ್ಲಿ ಪ್ರೋತ್ಸಾಹಿಸಿದ್ದಾರೆ. ಕಷ್ಟಸುಖಗಳಲ್ಲಿ ಭಾಗಿಯಾಗಿದ್ದಾರೆ. ನನ್ನ ಬಾಳ ಸಂಗಾತಿ **ಶ್ರೀಮತಿ ಮಂಜುಳ** ನನಗೆ ಸ್ಫೂರ್ತಿಯ ಶಕ್ತಿಯಾಗಿ ಕಾರ್ಯನಿರ್ವಹಿಸಿದ್ದಾರೆ.

ದಾವಣಗೆರೆಯ **ಶಾಂತಲ ಕಂಪ್ಯೂಟರ್**, (#3437, ಎಂ.ಸಿ.ಸಿ. 'ಬಿ' ಬ್ಲಾಕ್) ಕೇಂದ್ರದ ಮಾಲಿಕರಾದ **ಶ್ರೀ ಕೆ. ಎಫ್. ರಾಘವೇಂದ್ರ** ಮತ್ತು **ಶ್ರೀಮತಿ ಪುಷ್ಪ** ರವರು ಮತ್ತು **ಶ್ರೀರಾಮ್ ಕಂಪ್ಯೂಟರ್ಸ್**, (ಕೆ.ಟಿ.ಜೆ, ನಗರ, ದಾವಣಗೆರೆ) ಕೇಂದ್ರದ ಮಾಲಿಕರಾದ **ಆರ್. ರಮೇಶ್** ಇವರು ಶ್ರದ್ಧಾಪೂರ್ವಕವಾಗಿ ಸಮಯಕ್ಕೆ ಸರಿಯಾಗಿ ಡಿ.ಟಿ.ಪಿ. ಮಾಡಿಕೊಟ್ಟಿದ್ದಾರೆ. ಚಳ್ಳಕೆರೆಯ ಆತ್ಮೀಯ ಮಿತ್ರ **ಡಾ|| ಸಿ. ಶಿವಲಿಂಗಪ್ಪ** ಮತ್ತು ಗೆಳೆಯ **ಎಸ್. ಆರ್. ಅಂಜನಪ್ಪ** ಇವರು ಶ್ರಮವಯಿಸಿ ಅಚ್ಚುಕಟ್ಟಾಗಿ ಡಿ.ಟಿ.ಪಿ. ಕರಡು ಪ್ರತಿಯನ್ನು ಉತ್ತಮವಾಗಿ ತಿದ್ದಿಕೊಟ್ಟು ಚೆಂದಗೊಳಿಸಿದ್ದಾರೆ.

ಈ ಎಲ್ಲಾ ಗೌರವಾನ್ವಿತ ಮಹನೀಯರಿಗೆ ಈ ಸಂದರ್ಭದಲ್ಲಿ ತುಂಬು ಹೃದಯದ ಕೃತಜ್ಞತಾ ಪೂರ್ವಕ ನಮನಗಳನ್ನು ಸಲ್ಲಿಸುತ್ತೇನೆ.

**ಕೆ. ಎಂ ಮಲ್ಲಿಕಾರ್ಜುನ**